ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ:ಎಲ್‌ಆರ್‌ಓ: 12/2018-19 ದಿನಾಂಕ: 30 -04 -2018.

## ಸುತ್ತೋಲೆ

ವಿಷಯ:- ಅಧಿಕಾರಿ ಮತ್ತು ಸಿಬ್ಬಂದಿಗಳ ಸೇವಾ ವಿವರಗಳನ್ನು ಮತ್ತು ಪ್ರಸ್ತುತ ಇರುವ ಖಾಲಿ ಹುದ್ದೆಗಳ ಮಾಹಿತಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ: ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಸಂಖ್ಯೆ ಸಿವಿಲ್ ಅಪೀಲ್ ಸಂಖ್ಯೆ : 2368/2011 ಮೇರೆಗೆ

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನ್ವಯ ಈ ಇಲಾಖೆಯಲ್ಲಿನ ಕೆಲವೊಂದು ವೃಂದಗಳಲ್ಲಿ ಪದೋನ್ನತಿ ಮುಂಬಡ್ತಿ ಮತ್ತು ಹಿಂಬಡ್ತಿ ಕಾರ್ಯನಡೆದಿದ್ದು ಸದರಿ ವಿಷಯವಾಗಿ ಕೆಲವೊಂದು ನ್ಯೂನ್ಯತೆಗಳ ಬಗ್ಗೆ ಆಕ್ಷೇಪಣೆಗಳಿರುವುದರಿಂದ ಅದನ್ನು ಪರಿಶೀಲಿಸಿ ಸರಿಪಡಿಸಿ ನ್ಯಾಯಾಲಯಕ್ಕೆ ಸೂಕ್ತ ದಾಖಲೆಗಳನ್ನು ಒದಗಿಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡ ವೃಂದದ ಸೇವಾ ವಿವರಗಳನ್ನು ಮತ್ತು ನಮೂನೆಯಲ್ಲಿ ತಿಳಿಸಿರುವ ಮಾಹಿತಿಯನ್ನು ನಿಮ್ಮಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಆಡಳಿತಾಧಿಕಾರಿಗಳು/ಪ್ರಭಾರಿ ಅಧಿಕಾರಿಗಳ ಮುಖಾಂತರ ದಿನಾಂಕ: 04/05/2018 ರ ಒಳಗೆ (ಎಲ್ಲಾ ಮಾಹಿತಿಯನ್ನು ನಮೂನೆ-1 ಮತ್ತು 2 ರಂತೆ ಸಾಫ್ಟ್‌ಕಾಪಿಯೊಂದಿಗೆ (ಎಕ್ಸೆಲ್ ನಲ್ಲಿ) ) ಬಂದು ಈ ಕಾರ್ಯಾಲಯಕ್ಕೆ ಖುದ್ದು ಸಲ್ಲಿಸಲು ಸೂಚಿಸಿದೆ. ಈ ವಿಷಯ ಅತಿ ಜರೂರು ಎಂದು ಭಾವಿಸುವುದು. ಮಾಹಿತಿ ಬಾರದಿದ್ದಲ್ಲಿ ಅಂತಹ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. (ನಿಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಆರೋಗ್ಯ ಸಂಸ್ಥೆಗಳೆಂದರೆ ಜಿಲ್ಲಾ ಆಸ್ಪತ್ರೆ, ಜಿಲ್ಲಾ ತರಬೇತಿ ಕೇಂದ್ರ, ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಿಂದ ಪಡೆದು ಕ್ರೋಢೀಕರಿಸಿ ಸಲ್ಲಿಸುವುದು).

1. ಸಹಾಯಕ ಆಡಳಿತಾಧಿಕಾರಿಗಳು
2. ನರ್ಸಿಂಗ್ ಅಧೀಕ್ಷಕರು ದರ್ಜೆ-1 ಮತ್ತು 2 ಹಾಗೂ ಹಿರಿಯ ಶುಶ್ರೂಷಕರು.
3. ಹಿರಿಯ ಆರೋಗ್ಯ ಮೇಲ್ವಿಚಾರಕರು ಪತ್ರಾಂಕಿತ ಗ್ರೂಪ್ ಬಿ
4. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು
5. ಉಪನ್ಯಾಸಕರು/ಟ್ಯೂಟರ್ಸ್/ಪ್ರಾಂಶುಪಾಲರು, ಎಎನ್‌ಎಂ ತರಬೇತಿ ಕೇಂದ್ರ ಮತ್ತು ಇತರೆ ತರಬೇತಿ ಕೇಂದ್ರಗಳ ವಿವರ.
6. ಆರೋಗ್ಯ ಶಿಕ್ಷಣಾಧಿಕಾರಿಗಳು ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ವಿವರ
7. ಪದವೀಧರ ಫಾರ್ಮಾಸಿಸ್ಟ್
8. ಮುಖ್ಯ ಫಾರ್ಮಾಸಿಸ್ಟ್

ಮುಖ್ಯ ಆಡಳಿತಾಧಿಕಾರಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ನಿರ್ದೇಶನಾಲಯ, ಬೆಂಗಳೂರು.

ಪ್ರತಿಯನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು/ನಿರ್ದೇಶಕರು/ಡೀನ್ ರವರಿಗೆ
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆಕುಕ ಸೇವೆಗಳ ನಿರ್ದೇಶನಾಲಯ ಆವರಣ, ಬೆಂಗಳೂರು-09.
4. ವೈದ್ಯಕೀಯ ಅಧೀಕ್ಷಕರು ಬೋರಿಂಗ್ ಆಸ್ಪತ್ರೆ/ವಾಣಿ ವಿಲಾಸ್ ಆಸ್ಪತ್ರೆ/ಬಿ.ಎಂ.ಸಿ/ದಂತ ಕಾಲೇಜು /ಕೆ.ಸಿ.ಜನರಲ್ ಆಸ್ಪತ್ರೆ/ಲೇಡಿ ಘೋಷಾ ಆಸ್ಪತ್ರೆ.
5. ಪ್ರಾಂಶುಪಾಲರು/ನಿರ್ದೇಶಕರು, ಆಕುಕ ತರಬೇತಿ ಕೇಂದ್ರ, ಮಾಗಡಿ ರಸ್ತೆ, ಬೆಂಗಳೂರು.
6. ಪ್ರಾಂಶುಪಾಲರು, ರಾಜ್ಯದ ಎಲ್ಲಾ ಆಕುಕ ತರಬೇತಿ ಕೇಂದ್ರಗಳು.
7. ಕಛೇರಿ ಪ್ರತಿ.

| ನಮೂನೆ-1 | | | | | | | | |
|---|---|---|---|---|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | ಸಂಸ್ಥೆಯ ಹೆಸರು | | | ಎಎನ್‌ಎಂಟಿಸಿ ತರಬೇತಿ ಕೇಂದ್ರ, ಸ್ಥಳ | | | ಷರಾ |
| | | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ | |
| | | | | | | | | |
| | | | | | | | | |
| | | | | | | | | |
| | | | | | | | | |

ವಿ.ಸೂ: [illegible]

ಅಧಿಕಾರಿಯ ಸಹಿ